# ಬಿಟ್ಟೆನೆಂದರೂ ಬಿಡದೀ ಮಾರಿ

## ಕಾಡುವ ಕಪ್ಪು ಶಿಲೀಂದ್ರ ಸೋಂಕು

**ಇದು ಕೊರೊನಾ ಸೋಂಕಿನ ಮತ್ತೊಂದು ಅವತಾರ. ತೀವ್ರ ತೊಂದರೆ ಅನುಭವಿಸಿದ ಕೊರೊನಾ ಪೀಡಿತರು ಗುಣಮುಖರಾದರೂ ಆಪತ್ತಿನಿಂದ ಮುಕ್ತಿ ಪಡೆಯುವಂತೆಯೇ ಇಲ್ಲ. ಕೊರೊನಾ ಗುಣವಾಗಲು ತೆಗೆದುಕೊಂಡ ಸ್ಟೀರಾಯ್ಡ್‌ಗಳ ಪರಿಣಾಮ ಕಪ್ಪು ಶಿಲೀಂದ್ರ ಸೋಂಕು ರೂಪದಲ್ಲಿ ಸದೆಬಡಿಯುತ್ತಿದೆ.**

■ ಉಮಾ ಅನಂತ್



ಕೊರೊನಾ ಸೋಂಕು ಜನರನ್ನು ಹೈರಾಣಾಗಿಸಿದ ಬೆನ್ನಲ್ಲೇ ಇದಕ್ಕೆ ಪೂರಕವಾದ ಮತ್ತೊಂದು ಕಾಯಿಲೆ ಬಾಧಿಸಲಾರಂಭಿಸಿದೆ. ಕಪ್ಪು ಶಿಲೀಂದ್ರ ಸೋಂಕು ಕೊರೊನೋತ್ತರ ಕಾಲದಲ್ಲಿ ಬರುತ್ತಿದ್ದು ಮತ್ತೊಂದು ದೊಡ್ಡ ಕಂಟಕವಾಗಿ ಪರಿಣಮಿಸಿದೆ. ಕೊರೊನಾ ಸೋಂಕು ರೋಗ ನಿರೋಧಕ ಶಕ್ತಿಯನ್ನು ಕುಂದಿಸುತ್ತದೆ. ಅತಿಯಾಗಿ ಸ್ಟೀರಾಯ್ಡ್ ಬಳಕೆ ಸೇರಿದಂತೆ ವಿವಿಧ ಕಾರಣಗಳಿಂದ ಶಿಲೀಂದ್ರ ಸೋಂಕು ಕಾಣಿಸಿಕೊಳ್ಳುತ್ತಿದೆ. ಇದು ವೈದ್ಯಕೀಯ ವಲಯದಲ್ಲೇ ತೀವ್ರ ಕಳವಳಕ್ಕೆ ಕಾರಣವಾಗಿದೆ.

ಕೋವಿಡ್‌ನಿಂದ ಚೇತರಿಸಿಕೊಂಡ ಕೆಲವರಿಗೆ ಅತ್ಯಂತ ಅಪಾಯಕಾರಿ ಶಿಲೀಂದ್ರ ಸೋಂಕು (ಮ್ಯೂಕೊರ್ಮೈಕೊಸಿಸ್ ಅಥವಾ ಬ್ಲಾಕ್ ಫಂಗಸ್) ಕಾಡಲಾರಂಭಿಸಿದೆ. ಇದರಿಂದಾಗಿಯೇ ದೃಷ್ಟಿ ಕಳೆದುಕೊಂಡ ಪ್ರಕರಣಗಳು ಕೂಡ ಕಂಡುಬರುತ್ತಿದ್ದು, ಹೆಚ್ಚಿನ ಆತಂಕಕ್ಕೆ ಕಾರಣವಾಗಿದೆ. ರೋಗನಿರೋಧಕ ಶಕ್ತಿ ಕಡಿಮೆ ಇದ್ದವರಲ್ಲಿ ಕೋವಿಡ್‌ನಿಂದ ಚೇತರಿಸಿಕೊಂಡ ಒಂದು ತಿಂಗಳ ಒಳಗಡೆ ಈ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಈ ಸೋಂಕು ಕಣ್ಣು, ಕಿವಿ ಮತ್ತು ಮೆದುಳಿಗೆ ವ್ಯಾಪಿಸಿಕೊಂಡು, ಜೀವಕ್ಕೆ ಅಪಾಯವನ್ನುಂಟು ಮಾಡುತ್ತಿರುವುದು ಅತ್ಯಂತ ಆತಂಕದ ವಿಚಾರ. ಕೋವಿಡ್ ಎರಡನೇ ಅಲೆಯ ಹೊಡೆತಕ್ಕೆ ಸಿಕ್ಕವರಿಗೆ ಇದೊಂದು ಅನಿರೀಕ್ಷಿತ ಆಘಾತವೂ ಹೌದು.

ಅನಿಯಂತ್ರಿತ ಮಧುಮೇಹವಿರುವ ಮತ್ತು ದೀರ್ಘಕಾಲ ತೀವ್ರ ನಿಗಾ ಘಟಕಕ್ಕೆ ದಾಖಲಾಗುವ ಕೋವಿಡ್ ರೋಗಿಗಳಲ್ಲಿಯೂ ಈ ಅಪಾಯಕಾರಿ ಶಿಲೀಂದ್ರ ಸೋಂಕು ಕಾಣಿಸಿಕೊಳ್ಳುತ್ತಿದೆ. ಈ ಸೋಂಕು ಶ್ವಾಸಕೋಶಗಳ ಮೇಲೂ ಪರಿಣಾಮ ಬೀರುತ್ತದೆ. ಕೋವಿಡ್‌ನಿಂದ ಚೇತರಿಸಿಕೊಂಡ ಬಳಿಕ ಕೆಲವರಲ್ಲಿ ಈ ಸೋಂಕು ಕಾಣಿಸಿಕೊಳ್ಳುತ್ತಿದೆ. ಕೋವಿಡ್ ಪೂರ್ವದಲ್ಲಿ ವಿರಳವಾಗಿದ್ದ ಈ ಕಾಯಿಲೆ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಈ ಕಾಯಿಲೆಗೆ ಅಗತ್ಯವಿರುವ ಔಷಧ ಸಮಯಕ್ಕೆ ಸರಿಯಾಗಿ ಸಿಗದೇ ಇದ್ದರೆ ಸೋಂಕು ವ್ಯಕ್ತಿಯ ಮೆದುಳು ಸೇರಿ ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇದೆ.

ಈ ಸೋಂಕಿಗೆ ಒಳಗಾದವರಲ್ಲಿ ಕೆಲವರು ಶಾಶ್ವತವಾಗಿ ದೃಷ್ಟಿ ಕಳೆದುಕೊಳ್ಳಬೇಕಾಗುತ್ತದೆ. ಅನಿಯಂತ್ರಿಕ ಮಧುಮೇಹ ಇರುವವರಿಗೆ, ಆಮ್ಲಜನಕದ ಅವಶ್ಯಕತೆ ಇರುವವರಿಗೆ, ಅತಿಯಾಗಿ ಸ್ಟೀರಾಯ್ಡ್ ಬಳಸಬೇಕಾಗಿ ಬಂದವರಿಗೆ ಈ ಶಿಲೀಂದ್ರ ಸೋಂಕು ಬಾಧೆ ಹೆಚ್ಚು. ಶೇ. 60ರಷ್ಟು ಸಾವು ಸಂಭವಿಸುತ್ತದೆ ಎಂಬ ವೈದ್ಯರ ಲೆಕ್ಕಾಚಾರವೂ ನಿಜವಾಗುತ್ತಿದೆ. ನೆರೆಯ ಮಹಾರಾಷ್ಟ್ರದಲ್ಲಿ ಈ ಸೋಂಕಿನಿಂದ ಸಾವಿನ ಸಂಖ್ಯೆಯೂ ಹೆಚ್ಚಾಗುತ್ತಿದೆ. ನಮ್ಮ ರಾಜ್ಯದಲ್ಲೂ ಈ ಪ್ರಕರಣಗಳು ಕಾಣಿಸಿಕೊಳ್ಳುತ್ತಿದ್ದು ಜನರಲ್ಲಿ ಬದುಕಿನ ಭರವಸೆಯನ್ನೇ ಕಸಿಯುತ್ತಿದೆ.

### ಸ್ಟೀರಾಯ್ಡ್ ಕೊಡುವುದೂ ಕಾರಣ...

'ರೋಗನಿರೋಧಕ ಶಕ್ತಿ ಕಡಿಮೆ ಇರುವವರಿಗೆ ಸಹಜವಾಗಿಯೇ ಕೊರೊನಾ ಸೋಂಕು ಬೇಗನೆ ಅಡರುತ್ತದೆ. ಜೊತೆಗೆ ಕಪ್ಪು ಶಿಲೀಂದ್ರವೂ. ಸಕ್ಕರೆ ಕಾಯಿಲೆ ಇರುವವರಿಗೆ ಕೊರೊನಾ ಬಂದರೆ ಇದು ವಾಸಿಯಾಗಲು ಅತಿಯಾಗಿ ಸ್ಟೀರಾಯ್ಡ್ ಕೊಡಬೇಕಾಗುತ್ತದೆ. ಇದರಿಂದ ರೋಗಿಯ ರಕ್ತದಲ್ಲಿ ಸಕ್ಕರೆ ಪ್ರಮಾಣ ಗಣನೀಯವಾಗಿ ಹೆಚ್ಚುತ್ತದೆ. ಇದು ಕಪ್ಪು ಶಿಲೀಂದ್ರ ದೇಹವನ್ನಾಕ್ರಮಿಸಲು ದಾರಿ ಮಾಡಿಕೊಡುತ್ತದೆ. ಬೇಗ ಹರಡುವ ಸಾಧ್ಯತೆಯೂ ಇದೆ' ಎಂದು ಹೇಳುತ್ತಾರೆ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ತಲೆ ಮತ್ತು ಕತ್ತು (ಹೆಡ್ ಅಂಡ್ ನೆಕ್) ಸರ್ಜನ್ ಆಗಿರುವ ಡಾ. ಅತಿರಾ ರಾಮಕೃಷ್ಣನ್.

'ಕಪ್ಪು ಫಂಗಸ್‌ನಲ್ಲಿ ಎರಡು ವಿಧ. ಒಂದು ಆಕ್ರಮಣಕಾರಿ ಫಂಗಸ್, ಇನ್ನೊಂದು ಆಕ್ರಮಣವಲ್ಲದ ಫಂಗಸ್. ಇದನ್ನು ಬಾರದಂತೆ ತಡೆಯಲು ಕೋವಿಡ್ ಬಂದ ಕೂಡಲೇ ತಜ್ಞ ವೈದ್ಯರ ಹತ್ತಿರ ತಪಾಸಣೆ ಮಾಡಿಸಿಕೊಳ್ಳಬೇಕು. ಅದರಲ್ಲೂ ಮಧುಮೇಹ ಇರುವವರು ಕಡ್ಡಾಯವಾಗಿ ವೈದ್ಯರ ಬಳಿ ತೋರಿಸಿಕೊಳ್ಳಬೇಕು. ರಕ್ತದಲ್ಲಿ ಸಕ್ಕರೆಯ ಪ್ರಮಾಣವನ್ನು ಆಗಾಗ ಪರಿಶೀಲನೆ ಮಾಡುತ್ತಿರಬೇಕು' ಎನ್ನುತ್ತಾರೆ ಅವರು. 'ಸಾಮಾನ್ಯವಾಗಿ ಇಮ್ಯುನಿಟಿ ಕಡಿಮೆ ಇರುವವರಲ್ಲಿ ಬ್ಲ್ಯಾಕ್ ಫಂಗಸ್ ಬೇಗನೆ ದೇಹವನ್ನಾಕ್ರಮಿಸುತ್ತದೆ. ಮಧುಮೇಹ 300–400 ಇರುವವರಲ್ಲಿ, ಕಿಮೋಥೆರಪಿ, ಕಿಡ್ನಿ ತೊಂದರೆ ಇರುವವರು ಡಯಾಲಿಸಿಸ್ ಮಾಡಿಸುತ್ತಿರುವವರಲ್ಲಿ, ಎಚ್‌ಐವಿ ಸೋಂಕಿತರಲ್ಲಿ, ಬೋನ್ ಮಾರೊ ಟ್ರಾನ್ಸ್‌ಪ್ಲಾಂಟ್ ಮಾಡಿಸಿಕೊಂಡವರಲ್ಲಿ ಈ